# ಸುದ್ದಿ ಸಂಚಯ

❖ **ಅರುಣಾಚಲ** ಪ್ರದೇಶದ ಈಟಾನಗರದಲ್ಲಿರುವ ರಾಮಕೃಷ್ಣ ಸಂಸ್ಥೆಯ ಆಸ್ಪತ್ರೆಯು ವೈದ್ಯಕೀಯ ಸಂಚಾರಿ ಘಟಕವನ್ನು ಪ್ರಾರಂಭಿಸಿದೆ. ಅರುಣಾಚಲದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಶ್ರೀ ಸಿ.ಸಿ. ಸಿಂಗ್ಪೋ ಈಟಾನಗರದ ಹತ್ತಿರದಲ್ಲಿರುವ ಬಾತ್ ಎಂಬ ಗ್ರಾಮದಲ್ಲಿ ಇದರ ಉದ್ಘಾಟನೆಯನ್ನು ಮೇ ೨ರಂದು ನೆರವೇರಿಸಿದರು.

❖ ಏಪ್ರಿಲ್ ೨೫, ೨೦೦೫ರಂದು ದೈವಾಧೀನರಾದ ರಾಮಕೃಷ್ಣ ಮಹಾಸಂಘದ ೧೩ನೇ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ರಂಗನಾಥಾನಂದಜಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ದೆಹಲಿ ಕೇಂದ್ರವು ಮೇ ೧೫ರಂದು ಆಯೋಜಿಸಿತ್ತು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸ್ಮರಣಾನಂದರು ಗಣ್ಯರನ್ನು ಸ್ವಾಗತಿಸಿದರು. ಪ್ರಧಾನಿಗಳಾದ ಡಾ.ಮನಮೋಹನ್ ಸಿಂಗ್, ಮಾಜಿ ಪ್ರಧಾನಿಗಳಾದ ಶ್ರೀ ಐ.ಕೆ. ಗುಜ್ರಾಲ್, ಮಾಜಿ ಉಪಪ್ರಧಾನಿಗಳಾದ ಶ್ರೀ ಎಲ್.ಕೆ. ಅಡ್ವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಪೂಜ್ಯರೊಂದಿಗೆ ತಮಗಿದ್ದ ಸಂಬಂಧವನ್ನು ಸ್ಮರಿಸಿಕೊಳ್ಳುತ್ತ ಅವರಿಂದ ಪ್ರಭಾವಿತರಾಗಿರುವುದಾಗಿ ತಿಳಿಸಿದರು. ಈ ಕಾರ್ಯಕ್ರಮವನ್ನು ದೂರದರ್ಶನವು ರಾಷ್ಟ್ರೀಯ ಪ್ರಸಾರದಲ್ಲಿ ನೇರ ಪ್ರಸಾರ ಮಾಡಿತು.

❖ ಪಶ್ಚಿಮ ಬಂಗಾಳದ ಬಾಂಕುರಾ ಜಿಲ್ಲೆಯ ಅದೇ ಹೆಸರಿನ ಹಳ್ಳಿಯಲ್ಲಿರುವ ರಾಮಕೃಷ್ಣ ಕೇಂದ್ರವು ಒಂದು ಹೊಸ ಪೂರ್ವ-ಪ್ರಾಥಮಿಕ ಶಾಲೆ (Pre-Primary)ಯನ್ನು ಮೇ ೧೬ರಿಂದ ಪ್ರಾರಂಭಿಸಿದೆ. ರಾಮಕೃಷ್ಣ ಸಂಘದ ಹಿರಿಯ ಸಂನ್ಯಾಸಿಗಳೂ ಸಹಕಾರ್ಯದರ್ಶಿಗಳೂ ಆದ ಸ್ವಾಮಿ ಶಿವಮಯಾನಂದಜಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಉದ್ಘಾಟನೆಯನ್ನು ನೆರವೇರಿಸಿದರು.

❖ ಹೈದರಾಬಾದಿನಲ್ಲಿರುವ ರಾಮಕೃಷ್ಣ ಮಠವು ಬುದ್ಧ ಪೂರ್ಣಿಮೆ-೨೩.೦೫.೨೦೦೫ರಂದು, ಸುಸಜ್ಜಿತ ಸಂಚಾರಿ ವೈದ್ಯಕೀಯ ವಾಹನವನ್ನು ಪಡೆದುಕೊಂಡು, ಸೇವಾಕಾರ್ಯಕ್ರಮವನ್ನು ಈ ಶುಭದಿನದಂದು ಪ್ರಾರಂಭಿಸಿತು. ಈ ವಾಹನವನ್ನು ಹೈದರಾಬಾದಿನ ಸ್ಟೇಟ್ ಬ್ಯಾಂಕ್ ದೇಣಿಗೆಯಾಗಿ ನೀಡಿದೆ.

❖ ಸುನಾಮಿ ಪರಿಹಾರ ಕಾರ್ಯಕ್ರಮದಡಿಯಲ್ಲಿ ನಡೆದಿರುವ ಸೇವಾಕಾರ್ಯಗಳು:

೧.ಕೇರಳದ ಕಾಲಡಿ ಆಶ್ರಮವು ೧೬ ಕಟ್ಟುಮರಗಳನ್ನು, ಒಂದು ಯಂತ್ರಚಾಲಿತ ದೋಣಿಯನ್ನು ೯೦೦ ಕೆ.ಜಿ ಮೀನು ಒಡಿಯುವ ಬಲೆಗಳನ್ನು ಹಾಗೂ ಇತರ ಸಲಕರಣೆಗಳನ್ನು ಎರ್ನಾಕುಲಂ ಜಿಲ್ಲೆಯ ಎಡಮಾನಕ್ಕಾಡ್‌ನ ೧೮೭ ಕುಟುಂಬಗಳಿಗೆ ನೀಡಿದೆ.

೨.ಚೆನ್ನೈನಲ್ಲಿರುವ ಮಠವು ೩೬೪ ಯಂತ್ರಚಾಲಿತ ದೋಣಿಗಳನ್ನೂ, ೬೮ ಮೀನಿನ ಬಲೆಗಳನ್ನೂ ವಿತರಿಸಿದೆ. ಇದಲ್ಲದೆ ೩೧ ಹೊಲಿಗೆ ಯಂತ್ರಗಳು, ೨ ಸೈಕಲ್ಲುಗಳು, ಅಂಗವಿಕಲರಿಗೆ ವಿಶೇಷ ಬೈಸಿಕಲ್ಲು ಇತ್ಯಾದಿಗಳನ್ನೂ ನೀಡಿದೆ. ಇದಲ್ಲದೆ ಮನೆ ಕಟ್ಟಿಕೊಳ್ಳಲು ೧೦೪ ನಿವೇಶನಗಳನ್ನು ಹಾಗೂ ಮನೆಕಟ್ಟುವ ಸಾಮಗ್ರಿಗಳನ್ನು ನೀಡಿದೆ. ಕಡಲೂರು, ಕಾಂಚೀಪುರಂ, ಕನ್ಯಾಕುಮಾರಿ ಹಾಗೂ ನಾಗಪಟ್ಟಣಂ ಜಿಲ್ಲೆಗಳ ೨೦ ಗ್ರಾಮಗಳಿಂದ ೧೦೭೫ ಕುಟುಂಬಗಳು ಸಹಾಯ ಪಡೆದಿವೆ.

೩.ಶ್ರೀಲಂಕಾದ ಬಟ್ಟಿಕೋಲಾ ಆಶ್ರಮವು ಸುನಾಮಿಪೀಡಿತ ಜನರಿಗೆ ೩೫ ಬೈಸಿಕಲ್ಲುಗಳು, ಮೀನಿನ ಬಲೆಯಿರುವ ೯ ಫೈಬರ್‌ಗ್ಲಾಸ್ ದೋಣಿಗಳು ಹಾಗೂ ೩೭ ಹೊಲಿಗೆ ಯಂತ್ರಗಳನ್ನು ನೀಡಿದೆ.

❖ ಇತ್ತೀಚೆಗೆ ಚಂಡಮಾರುತದಿಂದ ತೀವ್ರ ನಷ್ಟಕ್ಕೊಳಗಾದ ಪಶ್ಚಿಮ ಬಂಗಾಳದ ನದಿಯಾ ಜಿಲ್ಲೆ ಹಾಗೂ ಉತ್ತರ ೨೪ ಪರಗನ ಜಿಲ್ಲೆಯ ಜನರಿಗೆ ಬೆಲ್‌ಘೋರಿಯಾದ ಕೇಂದ್ರವು ನೆರವು ನೀಡುತ್ತಿದ್ದು, ೫೨ ಮನೆಗಳ ಪುನರ್ನಿರ್ಮಾಣಕ್ಕೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸುತ್ತಿದೆ.

❖ ಶ್ರೀಶಾರದಾ ಮಠವು ಪಶ್ಚಿಮ ಬಂಗಾಳದ ಶಿಹೋರ್ ಗ್ರಾಮದಲ್ಲಿ ಒಂದು ಹೊಸ ಕೇಂದ್ರವನ್ನು ಶುಕ್ರವಾರ ೧೭ ಜೂನ್, ೨೦೦೫ರಂದು ಪ್ರಾರಂಭಿಸಿತು. ಈ ಸ್ಥಳದಲ್ಲಿ ಶ್ರೀಮಾತೆಯ ತಾಯಿ ಶ್ಯಾಮಾಸುಂದರೀ ದೇವಿಗೆ ದಿವ್ಯ ದರ್ಶನದಲ್ಲಿ ತಮ್ಮ ಮಗಳ ದಿವ್ಯತೆಯ ಪರಿಚಯವಾಗಿತ್ತು. ಆ ಸಮಯದಲ್ಲಿದ್ದ ಬಿಲ್ವವೃಕ್ಷ ಅವರಿಗಾದ ದಿವ್ಯದರ್ಶನಕ್ಕೆ ಸಾಕ್ಷಿಯೇನೋ ಎಂಬಂತೆ ಈಗಲೂ ಇದೆ. ಪ್ರಾರ್ಥನಾ ಮಂದಿರ ಹಾಗೂ ದೇವಸ್ಥಾನದ ಉದ್ಘಾಟನೆಯನ್ನು ಶಾರದಾ ಮಠದ ಪರಮಾಧ್ಯಕ್ಷರಾದ ಪ್ರವ್ರಾಜಿಕಾ ಶ್ರದ್ಧಾಪ್ರಾಣಾರವರು ನೆರವೇರಿಸಿದರು.



ಶಿಹೋರಿನ ಪವಿತ್ರ ಬಿಲ್ವವೃಕ್ಷ